ಕರ್ನಾಟಕ ಲೋಕಸೇವಾ ಆಯೋಗ
"ಉದ್ಯೋಗ ಸೌಧ" ಬೆಂಗಳೂರು-560 001.

ಸಂಖ್ಯೆ:KPSCKA/EXA2/PRSL/10/2026-EXAM2/251 **ದಿನಾಂಕ:27-08-2026**

ಅಧಿಸೂಚನೆ

ಆಯೋಗವು ಕರ್ನಾಟಕ ರಾಜ್ಯ ಲೆಕ್ಕ ಪತ್ರ ಸೇವೆಗಳು (ನೇಮಕಾತಿ) ನಿಯಮಗಳು 2011, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2015 ಮತ್ತು (ತಿದ್ದುಪಡಿ) ನಿಯಮಗಳು 2023ರನ್ವಯ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಇತರೆ ನಿಯಮಗಳಡಿಯಲ್ಲಿ ಉಳಿಕೆ ಮೂಲ ವೃಂದದಲ್ಲಿನ ಕೆಳಕಂಡ ಗ್ರೂಪ್- 'ಎ' ಮತ್ತು ಗ್ರೂಪ್ 'ಬಿ' ವೃಂದದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ Online ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಮೇಲ್ಕಂಡ ನೇಮಕಾತಿ ನಿಯಮಗಳನ್ವಯ ಸ್ಪರ್ಧಾತ್ಮಕ ಪರೀಕ್ಷೆಯ ನಡೆಸುವಿಕೆಯು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ನಿಯಮ (5) ಮತ್ತು (7) ಯಥಾವತ್ತಾಗಿ ಅನ್ವಯವಾಗುತ್ತವೆ.

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
ಗ್ರೂಪ್ – 'ಎ' ಹುದ್ದೆಗಳು (ಉಳಿಕೆ ಮೂಲ ವೃಂದ)			
1	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ	ಸಹಾಯಕ ನಿಯಂತ್ರಕರು (ವೇತನ ಶ್ರೇಣಿ :83700-155200)	15
ಗ್ರೂಪ್ –' ಬಿ' ಹುದ್ದೆಗಳು (ಉಳಿಕೆ ಮೂಲ ವೃಂದ)			
2	ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ	ಲೆಕ್ಕ ಪರಿಶೋಧನಾಧಿಕಾರಿ (ವೇತನ ಶ್ರೇಣಿ :69250-134200)	53

1) ಆಯ್ಕೆಪ್ರಕ್ರಿಯೆಗೆ ನಿಗದಿಪಡಿಸಿರುವ ದಿನಾಂಕಗಳು :

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ	**28-08-2026**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	**26-09-2026**
ಪೂರ್ವಭಾವಿ ಪರೀಕ್ಷಾ ದಿನಾಂಕ (ತಾತ್ಕಾಲಿಕ)	**06-12-2026**

- ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಡೆಸಲಾಗುವ ಪರೀಕ್ಷೆಗಳ ಸಂಭಾವ್ಯ ದಿನಾಂಕಗಳು ಹಾಗೂ ಫಲಿತಾಂಶ ಪ್ರಕಟಣೆ ಸಂಭಾವ್ಯ ದಿನಾಂಕಗಳ (Tentative) ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.
- ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾದಲ್ಲಿ ಅಭ್ಯರ್ಥಿಗಳು ಈ ಕೆಳಕಂಡ ಹೆಲ್ಪ್ ಲೈನ್ ನಂಬರ್ ಅನ್ನು ಸಂಪರ್ಕಿಸಲು ಸೂಚಿಸಿದೆ.

HELP LINE NO: 080-30574957 / 30574901/ 22356487/ 22200090

- **ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೂ ಕಾಯದೆ ಮುಂಚಿತವಾಗಿ ನಿಗದಿತ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಕೊನೆಯ ಗಳಿಗೆಯಲ್ಲಿ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ತಾಂತ್ರಿಕ ದೋಷ/ತೊಂದರೆ ಉಂಟಾದಲ್ಲಿ ಆಯೋಗವು ಜವಾಬ್ದಾರಿಯಾಗುವುದಿಲ್ಲ.**

2. ವಿಶೇಷ ಸೂಚನೆ:-

2.1 ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ಓದಿ ಅರ್ಥೈಸಿಕೊಂಡು ತದನಂತರವೇ ತಮಗೆ ಅನ್ವಯವಾಗುವ ವಿವರಗಳನ್ನು ಭರ್ತಿ ಮಾಡತಕ್ಕದ್ದು

2.2 ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ವಿವರಗಳನ್ನು ತಿದ್ದುಪಡಿ / ಸೇರ್ಪಡೆ ಮಾಡುವಂತೆ ನೀಡುವ ಯಾವುದೇ ಮನವಿಗಳನ್ನು ತಿರಸ್ಕರಿಸಲಾಗುವುದು.

2.3 ಅಭ್ಯರ್ಥಿಗಳು ವಯೋಮಿತಿ, ವಿದ್ಯಾರ್ಹತೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಗೂ ಅರ್ಜಿಯಲ್ಲಿ ಕೋರಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರ/ಇತರೆ ಪ್ರಮಾಣ ಪತ್ರಗಳನ್ನು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಈ ಅಧಿಸೂಚನೆಯ ಅನುಬಂಧ-2ರಲ್ಲಿ ಸೂಚಿಸಿರುವ ನಮೂನೆಗಳಲ್ಲಿಯೇ ಕಡ್ಡಾಯವಾಗಿ ತಮ್ಮ ಹೆಸರಿನಲ್ಲಿಯೇ ಪಡೆದಿಟ್ಟುಕೊಂಡು ಸದರಿ ದಾಖಲೆಗಳನ್ನು ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು, (ದಾಖಲೆಗಳು ಸ್ಪಷ್ಟವಾಗಿರಬೇಕು) ತಪ್ಪಿದ್ದಲ್ಲಿ ಅವರ ಮೀಸಲಾತಿ/ಅಭ್ಯರ್ಥಿತ್ವವನ್ನು ತಿರಸ್ಕರಿಸಲಾಗುವುದು.

2.4 ಅರ್ಜಿ ಸಲ್ಲಿಸುವ ಸಮಯದಲ್ಲಿ ಮೀಸಲಾತಿಯನ್ನು ಕೋರದೆ ತದನಂತರದಲ್ಲಿ ಮೀಸಲಾತಿಯನ್ನು ಪರಿಗಣಿಸುವಂತೆ ಕೋರಿ ಸಲ್ಲಿಸುವ ಮನವಿ/ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

2.5 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿಳಾಸ, ಪ್ರವರ್ಗ, ತಂದೆ-ತಾಯಿ ಹೆಸರು, ವಿದ್ಯಾರ್ಹತೆ ಮುಂತಾದ ವಿಷಯಗಳನ್ನು ಹಾಗೂ ಅರ್ಜಿಯ ಅಂಕಣಗಳಲ್ಲಿನ ಇತರೆ ವಿವರಗಳನ್ನು ತಪ್ಪಾಗಿ ನಮೂದಿಸಿರುವುದಾಗಿ ತಿಳಿಸಿ ಸದರಿ ಮಾಹಿತಿಗಳನ್ನು ಬದಲಾವಣೆ ಮಾಡುವಂತೆ ಮನವಿ ಸಲ್ಲಿಸುತ್ತಿರುವ ಹಿನ್ನೆಲೆಯಲ್ಲಿ ಆಯೋಗಕ್ಕೆ ಒಂದು ಬಾರಿ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸಿದ ನಂತರ ಸದರಿ ಅರ್ಜಿಯಲ್ಲಿನ ಮಾಹಿತಿಗಳನ್ನು ಆಯೋಗದ ಅಧಿಕಾರಿ/ಸಿಬ್ಬಂದಿಗಳಿಗೆ ತಂತ್ರಾಂಶದಲ್ಲಿ ಬದಲಾವಣೆ ಮಾಡಲು ಸಾಧ್ಯವಿರದ ಹಿನ್ನೆಲೆಯಲ್ಲಿ ಅಭ್ಯರ್ಥಿಗಳೇ ನೇರವಾಗಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಮಾಹಿತಿಗಳನ್ನು ಸರಿಪಡಿಸಿ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಸಂಬಂಧ ತದನಂತರ ಸಲ್ಲಿಸಲಾಗುವ ಯಾವುದೇ ಕೋರಿಕೆ/ಮನವಿಗಳನ್ನು ಆಯೋಗದಿಂದ ಪುರಸ್ಕರಿಸಲಾಗುವುದಿಲ್ಲ.

2.6 ಒಂದು ವೇಳೆ ಅಭ್ಯರ್ಥಿಯು ವಿಳಾಸ ನವೀಕರಿಸಲು (Updation) ಇಚ್ಛಿಸಿದಲ್ಲಿ ಸದರಿ ಅಭ್ಯರ್ಥಿಯು ಆಯೋಗದ ಕೇಂದ್ರ ಕಛೇರಿಗೆ ಅರ್ಜಿ ಪ್ರಿಂಟ್, ಪ್ರವೇಶ ಪತ್ರದ ಪ್ರತಿ, ಆಧಾರ್ ಕಾರ್ಡ್‌ನಂತಹ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗಿ ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.

2.7 ಅರ್ಜಿಗಳನ್ನು Online ಮೂಲಕವೇ ಭರ್ತಿ ಮಾಡಿ, ಭಾವಚಿತ್ರ/ಸಹಿ /ವಯೋಮಿತಿ/ ವಿದ್ಯಾರ್ಹತೆ ಹಾಗೂ ಕೋರಿದ ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಪ್ಲೋಡ್ ಮಾಡಿದ ನಂತರ ಶುಲ್ಕವನ್ನು ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/UPI ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದ ಹಾಗೂ ದಾಖಲೆಗಳನ್ನು/ ಭಾವಚಿತ್ರ/ ಸಹಿಯನ್ನು ಅಪ್ಲೋಡ್ ಮಾಡದೇ ಇರುವ/ಅಸ್ಪಷ್ಟ ದಾಖಲೆಗಳನ್ನು ಅಪ್ಲೋಡ್ ಮಾಡಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2.8 ಸದರಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿಯೊಂದಿಗೆ ಸಲ್ಲಿಸುವ ಲಗತ್ತುಗಳನ್ನು ಅವಶ್ಯಕ ಸಂದರ್ಭಗಳಲ್ಲಿ ಆಯೋಗವು ಪರಿಶೀಲನೆಗೆ ಒಳಪಡಿಸಬಹುದಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಜಾಗರೂಕತೆಯಿಂದ ತಮಗೆ ಅನ್ವಯಿಸುವ ಎಲ್ಲಾ ದಾಖಲೆಗಳನ್ನು ಸ್ಪಷ್ಟವಾಗಿ ಗೋಚರಿಸುವ ರೀತಿಯಲ್ಲಿ ಆಪ್‌ಲೋಡ್ ಮಾಡತಕ್ಕದ್ದು. ಮೂಲ ದಾಖಲೆಗಳ ಪರಿಶೀಲನೆ ಮಾಡುವ ಸಂದರ್ಭ ಬಂದಲ್ಲಿ ಈಗಾಗಲೇ ಆನ್‌ಲೈನ್ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿರುವ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.

3. ಅರ್ಜಿ ಸಲ್ಲಿಸುವ ಹಂತಗಳು:-

ಒಂದು ಬಾರಿಯ ನೋಂದಣಿ ಪ್ರಕ್ರಿಯೆ (OTR-ONE TIME REGISTRATION):

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುತ್ತಾರೆ ಎಂಬುದಾಗಿ ಅರ್ಥೈಸಿಕೊಳ್ಳುವಂತಿಲ್ಲ. ನಂತರದಲ್ಲಿ ಅರ್ಜಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದರಿಂದ ಯಾವುದೇ ಹಂತದಲ್ಲಿ ನ್ಯೂನತೆಗಳು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಈ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಒಂದು ಬಾರಿಯ ನೋಂದಣಿ ಪ್ರಕ್ರಿಯೆಯನ್ನು ಒಳಗೊಂಡಿದ್ದು, **(OTR-ONE TIME REGISTRATION)** ಅಭ್ಯರ್ಥಿಗಳು ನೀಡಿರುವ ಮಾಹಿತಿಯನ್ನು ಮುಂದಿನ ಎಲ್ಲಾ ಅಧಿಸೂಚನೆಗಳಿಗೂ ಪರಿಗಣಿಸಲಾಗುವುದರಿಂದ, ಅಭ್ಯರ್ಥಿಗಳು Profile Creation/ ರುಜುವಾತುಗಳು ಸೃಷ್ಟಿಸುವ ಹಂತದಲ್ಲಿ ಅತೀ ಜಾಗರೂಕತೆಯಿಂದ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಬೇಕಾಗಿದೆ. ಅಭ್ಯರ್ಥಿಗಳು

ಸೂಚನೆಗಳನ್ನು ಹಂತ ಹಂತವಾಗಿ ಓದಿಕೊಳ್ಳತಕ್ಕದ್ದು. ಎಲ್ಲಾ ಸೂಚನೆಗಳನ್ನು ಓದಿದ ನಂತರವೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

3.1 ಅಭ್ಯರ್ಥಿಗಳು KPSC ವೆಬ್‌ಸೈಟ್ ಮೂಲಕ ಮಾತ್ರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು, ಇದರ ಹೊರತಾಗಿ ಯಾವುದೇ ಇತರ ಮೂಲಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

3.2 ಹೊಸದಾಗಿ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಲು, ಅರ್ಜಿದಾರರು KPSC ವೆಬ್‌ಸೈಟ್ https://kpsconline.karnataka.gov.in ಗೆ ಭೇಟಿ ನೀಡಬೇಕು ಮತ್ತು ತಮ್ಮನ್ನು ನೋಂದಾಯಿಸಿಕೊಳ್ಳಲು New Registration "ಹೊಸ ನೋಂದಣಿ" ಲಿಂಕ್ ಅನ್ನು ಕ್ಲಿಕ್ ಮಾಡಬೇಕು.

3.3 ನೋಂದಣಿ ಮತ್ತು ಲಾಗಿನ್ ರುಜುವಾತುಗಳನ್ನು ರಚಿಸಲು ನೀವು (ಅಭ್ಯರ್ಥಿಗಳು) ಮಾನ್ಯವಾದ ಇ-ಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಹೊಂದಿರುವಿರಿ ಎಂದು ಖಚಿತಪಡಿಸಿಕೊಳ್ಳಿ.

3.4 ಒಮ್ಮೆ ನೀವು ನೋಂದಾಯಿಸಿದ ಮತ್ತು ಲಾಗಿನ್ ರುಜುವಾತುಗಳನ್ನು ಪಡೆದ ನಂತರ, "ಅರ್ಜಿದಾರರ ವಿವರಗಳ ನೋಂದಣಿ" ಕ್ಲಿಕ್ ಮಾಡುವ ಮೂಲಕ ನಿಮ್ಮ ಸಂಪೂರ್ಣ ಮಾಹಿತಿಯನ್ನು ಭರ್ತಿ ಮಾಡಲು ಮುಂದುವರೆಯಿರಿ.

3.5 ಅಭ್ಯರ್ಥಿಗಳು ತಮ್ಮ ವಿವರಗಳನ್ನು ಒಮ್ಮೆ ಮಾತ್ರ ಭರ್ತಿ ಮಾಡಬೇಕಾಗುತ್ತದೆ ಮತ್ತು ಈ ವಿವರಗಳನ್ನು ಎಲ್ಲಾ ಭವಿಷ್ಯದ KPSC ಅಧಿಸೂಚನೆಗಳಿಗೆ ಬಳಸಲಾಗುತ್ತದೆ. ಆದ್ದರಿಂದ ನಿಮ್ಮ USER ID ಮತ್ತು Passwordಗಳನ್ನು ಜೋಪಾನವಾಗಿ ಕಾಯ್ದಿಟ್ಟುಕೊಳ್ಳಿ.

3.6 ಅಭ್ಯರ್ಥಿಗಳು Applicant Login Pageನಲ್ಲಿ Enrollment Number or Mobile Number or E-mail ID ಮೂಲಕ OTP ಪಡೆದು **login** ಆಗಬಹುದಾಗಿದೆ. ಅಭ್ಯರ್ಥಿಗಳು Application Submit ಮಾಡುವ ಮುನ್ನ Profile ಅನ್ನು Update ಮಾಡಿ ಹೊಸ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ನೀವು ನಿಮ್ಮ Loginನಲ್ಲಿ ಮಾತ್ರ ನಿಮ್ಮ ಮಾಹಿತಿಯನ್ನು ನವೀಕರಿಸಬಹುದು.

3.7 ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಮೊದಲು (ಅಂದರೆ submit ಮಾಡುವ ಮೊದಲು) ಎಲ್ಲಾ ವಿವರಗಳು ಸರಿಯಾಗಿದೆಯೇ ಎಂದು ಪರಿಶೀಲಿಸಿಕೊಂಡು ಸಲ್ಲಿಸಲು (submit ಮಾಡಲು) ಸೂಚಿಸಿದೆ. ಸಲ್ಲಿಸಿದ ನಂತರ ವಿವರಗಳನ್ನು ತಪ್ಪಾಗಿ ಸಲ್ಲಿಸಿದ್ದು ಸರಿಪಡಿಸಿಕೊಡುವಂತೆ ಆಯೋಗಕ್ಕೆ ಪತ್ರ ವ್ಯವಹಾರ ಅಥವಾ E-Mail ಮೂಲಕ ಕಳುಹಿಸುವ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

<u>ಸೂಚನೆ:</u>

3.8 "ವೈಯಕ್ತಿಕ ವಿವರದಲ್ಲಿ" SSLC ಯನ್ನು 2002 ಅಥವಾ ಅದಕ್ಕಿಂತ ಹಿಂದೆ ಅಧ್ಯಯನ ಮಾಡಿದ ಅಭ್ಯರ್ಥಿಗಳು ವಿವರಗಳನ್ನು ಸ್ವ [Manual Entry/ಕೈಬರವಣಿಗೆಯಲ್ಲಿ] ನಮೂದು ಮಾಡಬೇಕಾಗಿರುತ್ತದೆ. 2003 ಮತ್ತು ನಂತರದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳು SSLC ನೋಂದಣಿ ಸಂಖ್ಯೆಯನ್ನು ನಮೂದಿಸಿದಲ್ಲಿ ವಿವರಗಳು ಸ್ವಯಂಚಾಲಿತವಾಗಿ ಅಧ್ಯಯನ ಮಾಡಿದ ಬೋರ್ಡಿನಿಂದ ನೇರವಾಗಿ ದಾಖಲಾಗುತ್ತದೆ.

3.9 "ವೈಯಕ್ತಿಕ ವಿವರದಲ್ಲಿ" CBSE ಯನ್ನು 2003 ಅಥವಾ ಅದಕ್ಕಿಂತ ಹಿಂದೆ ಹಾಗೂ ICSE/ ಇತರೆ ರಾಜ್ಯ ಸರ್ಕಾರದ 10ನೇ ತರಗತಿಯನ್ನು ಅಧ್ಯಯನ ಮಾಡಿದ ಅಭ್ಯರ್ಥಿಗಳು ವಿವರಗಳನ್ನು ಸ್ವತ: [Manual Entry/ಕೈಬರವಣಿಗೆಯಲ್ಲಿ] ನಮೂದು ಮಾಡಬೇಕಾಗಿರುತ್ತದೆ. 2004 ಮತ್ತು ನಂತರದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳು CBSE ನೋಂದಣಿ ಸಂಖ್ಯೆಯನ್ನು ನಮೂದಿಸಿದಲ್ಲಿ ವಿವರಗಳು ಸ್ವಯಂಚಾಲಿತವಾಗಿ ಅಧ್ಯಯನ ಮಾಡಿದ ಬೋರ್ಡಿನಿಂದ ನೇರವಾಗಿ ದಾಖಲಾಗುತ್ತದೆ.

3.10 "ವಿದ್ಯಾರ್ಹತೆಯ ವಿವರದಲ್ಲಿ" PUC ತರಗತಿಯನ್ನು 2007 ಅಥವಾ ಅದಕ್ಕಿಂತ ಹಿಂದೆ ಅಭ್ಯಸಿಸಿದ್ದಲ್ಲಿ ಅಥವಾ ಯಾವುದೇ ಡಾಟಾ ಬಾರದೇ ಇದ್ದಲ್ಲಿ ಸ್ವತಃ [ಕೈಬರವಣಿಗೆಯಲ್ಲಿ] ವಿವರಗಳನ್ನು ನಮೂದಿಸುವುದು.

3.11 PUC ತರಗತಿಯನ್ನು 2008 ಮತ್ತು ನಂತರದಲ್ಲಿ ಅಧ್ಯಯನ ಮಾಡಿದ ಅಭ್ಯರ್ಥಿಗಳು PUC ನೋಂದಣಿ ಸಂಖ್ಯೆಯನ್ನು ನಮೂದಿಸಿದಲ್ಲಿ ವಿವರಗಳು ಸ್ವಯಂಚಾಲಿತವಾಗಿ ಅಧ್ಯಯನ ಮಾಡಿದ ಬೋರ್ಡಿನಿಂದ ನೇರವಾಗಿ ದಾಖಲಾಗುತ್ತದೆ.

3.12 "ಗುರುತಿನ ಪುರಾವೆ/ವಿವರದಲ್ಲಿ"Aadhaar/Kutumba ID /Ration Card ನ ಸಂಖ್ಯೆಗಳನ್ನು ನಮೂದಿಸಿದಲ್ಲಿ ನಿಮ್ಮ ಖಾಯಂ ವಿಳಾಸದ ಮಾಹಿತಿಯನ್ನು ಸ್ವಯಂಚಾಲಿತವಾಗಿ ಪಡೆಯಲಾಗುವುದು.

3.13 ನಿಮ್ಮ ಅರ್ಜಿದಾರರ ವಿವರ ಪುಟದಲ್ಲಿ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಎಚ್ಚರಿಕೆಯಿಂದ

ಒದಗಿಸಿ ಮತ್ತು SAVE "ಉಳಿಸು" ಬಟನ್ ಅನ್ನು ಬಳಸಿಕೊಂಡು ಅದನ್ನು ಉಳಿಸಲು (Save ಆಗಿರುವುದನ್ನು) ಖಚಿತಪಡಿಸಿಕೊಳ್ಳಿ.

3.14 "ಮೀಸಲಾತಿ ವಿವರದಲ್ಲಿ "ನೀವು ಮೀಸಲಾತಿಯನ್ನು ಪಡೆಯಲು ಇಚ್ಛಿಸಿದಲ್ಲಿ ನಿಮ್ಮ ಜಾತಿ ಮೀಸಲಾತಿ / HK ಮೀಸಲಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ನಮೂದಿಸಿದಲ್ಲಿ API ಮೂಲಕ ವಿವರಗಳನ್ನು ಸ್ವಯಂ ಚಾಲಿತವಾಗಿ ಪಡೆಯಲಾಗುವುದು ಅಥವಾ ಸ್ವತಃ ಅಭ್ಯರ್ಥಿಗಳು [Manual Entry/ಕೈಬರವಣಿಗೆಯಲ್ಲಿ] ವಿವರಗಳನ್ನು ದಾಖಲಿಸಲು ಅವಕಾಶ ನೀಡಲಾಗಿರುತ್ತದೆ.

3.15 ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡಬೇಕಾಗುತ್ತದೆ. ಛಾಯಾಚಿತ್ರವು 200 ಕೆಬಿ ಮೀರಬಾರದು ಮತ್ತು ಸಹಿ 70 ಕೆಬಿ ಒಳಗೆ ಇರಬೇಕು.

ಗಮನಿಸಿ: ಕೇವಲ ಸಹಿ ಮತ್ತು ಛಾಯಾಚಿತ್ರವನ್ನು JPEG/JPG ಸ್ವರೂಪದಲ್ಲಿ ಅಪ್‌ಲೋಡ್ ಮಾಡಬೇಕು.

3.16 ವಿಶೇಷ ಸೂಚನೆ:- ನೀವು ಒಂದು ಬಾರಿ ನೋಂದಣಿ ಪ್ರಕ್ರಿಯೆಯನ್ನು (OTR-ONE TIME REGISTRATION) ಪೂರ್ಣಗೊಳಿಸಿದ ಮಾತ್ರಕ್ಕೆ ಮೇಲೆ ತಿಳಿಸಲಾದ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ. ನಿಮ್ಮ ರುಜುವಾತುಗಳೊಂದಿಗೆ ಲಾಗಿನ್ ಮಾಡಿದ ನಂತರ ಅರ್ಜಿಯನ್ನು ಸಲ್ಲಿಸಲು "Apply to Post" Tab ಅನ್ನು ಕ್ಲಿಕ್ ಮಾಡಿ ಅರ್ಜಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುತ್ತದೆ.

"KPSC udyoga" ತಂತ್ರಾಂಶದ ಮೂಲಕ ಆಯೋಗದಿಂದ ಅಧಿಸೂಚಿಸಲಾದ ಮೇಲ್ಕಂಡ ಹುದ್ದೆಗೆ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆಗಳು:
Instructions for Candidates to Apply Online for above Notified Post through KPSC Udyoga Software:

3.17 ನಿಮ್ಮ ರುಜುವಾತುಗಳೊಂದಿಗೆ ಲಾಗ್‌ಇನ್ ಮಾಡಿದ ನಂತರ, ನೀವು ಸಕ್ರಿಯ ಅಧಿಸೂಚನೆಗಳನ್ನು ನೋಡುತ್ತೀರಿ. ಅರ್ಜಿಸಲ್ಲಿಸಲು "Apply to Post" Tab ಅನ್ನು ಕ್ಲಿಕ್ ಮಾಡಿ.

3.18 "Apply Post" ಲಿಂಕ್ ಅನ್ನು ಕ್ಲಿಕ್ ಮಾಡುವುದರಿಂದ ನೀವು ಅಧಿಸೂಚನೆಯ ಪ್ರಕಾರ ಅರ್ಹತಾ ಮಾನದಂಡಗಳನ್ನು ಪೂರೈಸಿದ್ದೀರಾ ಎಂದು ತಂತ್ರಾಂಶವು ಪರಿಶೀಲಿಸುತ್ತದೆ. ನೀವು ಅನರ್ಹರಾಗಿದ್ದರೆ, ಅದರಂತೆ ಸಂದೇಶವನ್ನು (Alert Message) ಪ್ರದರ್ಶಿಸುತ್ತದೆ.

3.19 ಅರ್ಹತಾ ಷರತ್ತುಗಳನ್ನು ಪೂರೈಸಿರುವ ಅಭ್ಯರ್ಥಿಗಳಿಗೆ ಮಾತ್ರ ಅವರ ಅರ್ಜಿಯನ್ನು ಮುಂದುವರಿಸಲು ತಂತ್ರಾಂಶವು ಅನುಮತಿಸುತ್ತದೆ. ಅಭ್ಯರ್ಥಿಗಳು Notification ಅನ್ನು ಪೂರ್ಣವಾಗಿ ಓದಿ ತಮ್ಮ ಅರ್ಹತೆ ಬಗ್ಗೆ ಮನದಟ್ಟು ಮಾಡಿಕೊಂಡ ನಂತರವೇ ಅರ್ಜಿ ಹಾಕುವುದು ಮತ್ತು ಶುಲ್ಕವನ್ನು ತುಂಬುವುದು.

3.20 **ಅರ್ಜಿಯ ಅಂತಿಮ ಸಲ್ಲಿಕೆಗೆ ಮೊದಲು, ಅರ್ಜಿಯಲ್ಲಿನ ಎಲ್ಲಾ ಸಂಬಂಧಿತ ಕ್ಷೇತ್ರಗಳನ್ನು ಸರಿಯಾಗಿ ಭರ್ತಿ ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ. ನಿರ್ದಿಷ್ಟ ಹುದ್ದೆಗೆ ಅರ್ಜಿ ಸಲ್ಲಿಸಿದ ನಂತರ ಸಲ್ಲಿಸಲಾದ ಅರ್ಜಿಯಲ್ಲಿನ ವಿವರಗಳನ್ನು ಮತ್ತೊಮ್ಮೆ ಬದಲಾವಣೆ ಮಾಡಲು ಬಯಸಿದಲ್ಲಿ "Applied Post" Tab ನಲ್ಲಿ ಸಲ್ಲಿಸಲಾದ ಹುದ್ದೆಯ ಅರ್ಜಿಯನ್ನು "Delete" ಮಾಡಿ ಮತ್ತೊಮ್ಮೆ OTR ಅರ್ಜಿಯಲ್ಲಿನ ವಿವರಗಳನ್ನು ಬದಲಾಯಿಸಿಕೊಂಡು ಹೊಸ ಅರ್ಜಿಯನ್ನು ಸಲ್ಲಿಸಬಹುದು. ಆದರೆ Delete ಮಾಡಿದ ಹುದ್ದೆಗೆ ಈಗಾಗಲೇ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಸರಿದೂಗಿಸುವ ಅಥವಾ ಹಿಂದಿರುಗಿಸುವ ಅವಕಾಶವಿರುವುದಿಲ್ಲ.**

3.21 ನಿರ್ದಿಷ್ಟ ಅಧಿಸೂಚನೆಗಾಗಿ ಅರ್ಜಿ ಶುಲ್ಕವನ್ನು ಪಾವತಿಸಲು ವಿಫಲವಾದರೆ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ. SC/ST/CAT-1/ದೈಹಿಕ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ.

3.22 ಈ ಕೆಳಗಿನ ವಿಧಾನಗಳನ್ನು ಬಳಸಿಕೊಂಡು ಪರೀಕ್ಷಾ ಶುಲ್ಕವನ್ನು ಪಾವತಿಸಬಹುದು:

- ನೆಟ್ ಬ್ಯಾಂಕಿಂಗ್
- ಡೆಬಿಡ್ ಕಾರ್ಡ್
- ಕ್ರೆಡಿಟ್ ಕಾರ್ಡ್
- UPI

3.23 ಶುಲ್ಕವನ್ನು ಪಾವತಿಸಲು ಕೆಳಗಿನ ವಿಧಾನವನ್ನು ಅನುಸರಿಸಿ:

- ಹಂತ 1: ನೀವು ಅರ್ಜಿ ಸಲ್ಲಿಸಲು ಬಯಸುವ ನಿರ್ದಿಷ್ಟ ಅಧಿಸೂಚನೆಗಾಗಿ " APPLY Post" ಲಿಂಕ್‌ಅನ್ನು ಕ್ಲಿಕ್ ಮಾಡಿ.
- ಹಂತ 2: ಆಯ್ಕೆಮಾಡಿದ ಅಧಿಸೂಚನೆಗಾಗಿ ಅಪ್ಲಿಕೇಶನ್ ಅನ್ನು ಪರಿಶೀಲಿಸಿ.
- ಹಂತ 3: "Pay Now" ಬಟನ್ ಅನ್ನು ಕ್ಲಿಕ್ ಮಾಡಿ, ಅದು ನಿಮ್ಮನ್ನು ಪಾವತಿ ಪರದೆಗೆ ಮರು ನಿರ್ದೇಶಿಸುತ್ತದೆ. ಅಲ್ಲಿ ನೀವು UPI, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಮತ್ತು ನೆಟ್ ಬ್ಯಾಂಕಿಂಗ್ ಗಳ ಮೂಲಕ ಪಾವತಿಸಲು ಆಯ್ಕೆ ಮಾಡಬಹುದು.
- ಹಂತ 4: ಯಶಸ್ವಿಯಾಗಿ ಪಾವತಿಯಾದಲ್ಲಿ, ಪಾವತಿಯ ಯಶಸ್ಸನ್ನು ದೃಢೀಕರಿಸುವ ಮೂಲಕ ನಿಮ್ಮನ್ನು KPSC Udyoga software ಗೆ ಮರು ನಿರ್ದೇಶಿಸಲಾಗುತ್ತದೆ.
- ಹಂತ 5: ನೀವು " Applied Post " ಗ್ರಿಡ್‌ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಬಹುದು.
- ಹಂತ 6: ಪಾವತಿ ವಹಿವಾಟು ವಿಫಲವಾದಲ್ಲಿ, Applied Post ವಿಭಾಗದಲ್ಲಿ "Re-Payment" ಲಿಂಕ್ ಅನ್ನು ಕ್ಲಿಕ್ ಮಾಡಿ ಮತ್ತು ಹಂತ 3 ಅನ್ನು ಪುನರಾವರ್ತಿಸಿ ಪಾವತಿ ವಹಿವಾಟು ಮಾಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ Browser Close / Refresh or Back button Press ಮಾಡಬಾರದು. ಪಾವತಿ ಮಾಡುವ ಸಂದರ್ಭದಲ್ಲಿ Processing / Pending ಬಂದಲ್ಲಿ, ಅಭ್ಯರ್ಥಿಗಳು Payment Complete ಆಗುವವರೆಗೆ ಕಾಯಲು ಸೂಚಿಸಿದೆ. ಇದರ ಬಗ್ಗೆ ಆಯೋಗವನ್ನು ಸಂಪರ್ಕಿಸುವ /ಮೇಲ್ ಅಥವಾ ಮಾಹಿತಿ ಕೇಳುವ ಅವಕಾಶವಿರುವುದಿಲ್ಲ.

3.24 ಅಭ್ಯರ್ಥಿಗಳು ಅಧಿಸೂಚನೆಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ನಂತರ QR Code ಇರುವ ಈ ಕೆಳಕಂಡ ಅಂಶಗಳನ್ನು ಒಳಗೊಂಡ ಸ್ವೀಕೃತಿಯನ್ನು ಆನ್‌ಲೈನ್‌ನಲ್ಲಿ ಪಡೆದುಕೊಳ್ಳತಕ್ಕದ್ದು.

- Application submitted
- Payment done
- Application is accepted

ಮೇಲ್ಕಂಡ ಅಂಶಗಳನ್ನೊಳಗೊಂಡ ಸ್ವೀಕೃತಿಯನ್ನು ಪಡೆದ ನಂತರವೇ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಅರ್ಥೈಸಿಕೊಳ್ಳುವುದು.

3.25 ಸ್ವೀಕೃತವಾದ ಅರ್ಜಿಯ ಪ್ರಿವ್ಯೂನಲ್ಲಿನ QR Code ಅನ್ನು scan ಮಾಡಿದಲ್ಲಿ ಅಭ್ಯರ್ಥಿಯ ಹೆಸರು, ಅಧಿಸೂಚನೆ ಸಂಖ್ಯೆ ಮತ್ತು ಅರ್ಜಿ ಸಲ್ಲಿಸಿದ ದಿನಾಂಕಗಳ ಮಾಹಿತಿ ಪಡೆಯಬಹುದು.

3.26 ಆಯೋಗದ ಅಧಿಸೂಚನೆಗೆ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ನಂತರ ಆಯೋಗವು ಪರೀಕ್ಷೆಯನ್ನು ನಿಗದಿಪಡಿಸಿದಾಗ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ನೀವು ಸೂಚನೆಯನ್ನು ಸ್ವೀಕರಿಸುತ್ತೀರಿ.

4) ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಅಧಿಸೂಚನೆಯಲ್ಲಿ ನೀಡಿರುವ ಅರ್ಜಿ ಭರ್ತಿ ಮಾಡುವ ಕುರಿತ ಸೂಚನೆಗಳು, ಅರ್ಹತಾ ಷರತ್ತುಗಳನ್ನು ಓದಿಕೊಳ್ಳತಕ್ಕದ್ದು. ನೇಮಕಾತಿ ಪ್ರಾಧಿಕಾರವು ದೃಢೀಕರಿಸಿ ನೀಡಿರುವ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು:-

ಸಾ.ಅ	ಸಾಮಾನ್ಯ ಅರ್ಹತೆ	GM	General Merit
ಪ.ಜಾ	ಪರಿಶಿಷ್ಟ ಜಾತಿ	SC	Scheduled Caste
ಪ.ಪಂ	ಪರಿಶಿಷ್ಟ ಪಂಗಡ	ST	Scheduled Tribe
ಪ್ರ.-1	ಪ್ರವರ್ಗ-1	Cat–1	Category – I
2ಎ	ಪ್ರವರ್ಗ-2ಎ	2A	Category – 2A
2ಬಿ	ಪ್ರವರ್ಗ-2ಬಿ	2B	Category – 2B
3ಎ	ಪ್ರವರ್ಗ-3ಎ	3A	Category – 3A
3ಬಿ	ಪ್ರವರ್ಗ-3ಬಿ	3B	Category – 3B
ಮಾ.ಸೈ	ಮಾಜಿ ಸೈನಿಕ	Ex-MP	Ex-Military Person

ಗ್ರಾಮೀಣ	ಗ್ರಾಮೀಣ ಅಭ್ಯರ್ಥಿ	Rural	Rural Candidate
ಕ.ಮಾ.ಅ	ಕನ್ನಡ ಮಾಧ್ಯಮ ಅಭ್ಯರ್ಥಿ	KMS	Kannada Medium Student
ಅಂ.ವಿ.	ಅಂಗವಿಕಲ ಅಭ್ಯರ್ಥಿ	PH	Physically Handicapped
ಉ.ಮೂ.ವೃ	ಉಳಿಕೆ ಮೂಲ ವೃಂದ	RPC	Residual Parent Cadre
ತೃ.ಲಿ	ತೃತೀಯ ಲಿಂಗ	TG	Transgender

5) ಶುಲ್ಕ:-

ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ	**ರೂ.600/-**
ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	**ರೂ.300/-**
ಮಾಜಿ ಸೈನಿಕ ಅಭ್ಯರ್ಥಿಗಳಿಗೆ	**ರೂ. 50/-**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ	**ಶುಲ್ಕ ಪಾವತಿಯಿಂದ ವಿನಾಯಿತಿ ಇದೆ.**

5.1 ಅಭ್ಯರ್ಥಿಗಳು ನಿಗದಿಪಡಿಸಿದ ಶುಲ್ಕವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

5.2 ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ/ಸಮಯದ ನಂತರ ಶುಲ್ಕವನ್ನು ಪಾವತಿಸಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ.

6) ಅರ್ಹತಾ ಷರತ್ತುಗಳು:-

ಅ)	ಭಾರತೀಯ ನಾಗರೀಕನಾಗಿರತಕ್ಕದ್ದು.
ಆ)	ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
ಇ)	ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.
ಈ)	ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.
(ಉ)	ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ಖಾಯಂ ಆಗಿ ಡಿಬಾರ್ ಆದ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ

(ಊ)	ಯಾವುದೇ ನೈತಿಕ ಪರಿಭಾಷೆಗೆ ಶಿಕ್ಷೆಗೆ ಒಳಪಟ್ಟ ವ್ಯಕ್ತಿ ಅಥವಾ ಕೇಂದ್ರ ಅಥವಾ ಕರ್ನಾಟಕ ಅಥವಾ ಇತರೆ ರಾಜ್ಯದ ಲೋಕ ಸೇವಾ ಆಯೋಗದಿಂದ ನಡೆಸಲಾಗುವ ಪರೀಕ್ಷೆಗಳಿಂದ ಅಥವಾ ನೇಮಕಾತಿಗಳಿಂದ ತಾತ್ಕಾಲಿಕವಾಗಿ ಡಿಬಾರ್ ಆದ ಅಥವಾ ಅನರ್ಹಗೊಂಡ ವ್ಯಕ್ತಿಯು, ಸರ್ಕಾರವು ಎಲ್ಲಾ ಸಂದರ್ಭಗಳನ್ನು ಮರುಪರಿಶೀಲಿಸಿ ಅವರು ನೇಮಕಾತಿಗೆ ಅರ್ಹರೆಂದು ಪರಿಗಣಿಸುವವರೆಗೂ, ನೇಮಕಾತಿಗೆ ಅರ್ಹರಾಗುವುದಿಲ್ಲ.

ಕಂಡಿಕೆ-06ರಲ್ಲಿ ತಿಳಿಸಿರುವ ಅರ್ಹತಾ ಷರತ್ತುಗಳ ಜೊತೆಗೆ ಈ ಕೆಳಕಂಡ ನಿಗದಿತ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

7) <u>ಸಹಾಯಕ ನಿಯಂತ್ರಕರು ಮತ್ತು ಲೆಕ್ಕಪರಿಶೋಧನಾಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆ</u> :-

ಭಾರತ ಸರ್ಕಾರದ ಕಾನೂನು ರೀತ್ಯಾ ಸ್ಥಾಪಿಸಲ್ಪಟ್ಟಿರುವ ವಿಶ್ವವಿದ್ಯಾಲಯದಿಂದ ವಾಣಿಜ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ (ಎಂ.ಕಾಂ.) ಅಥವಾ ಎಂ.ಬಿ.ಎ. (ಆರ್ಥಿಕ) ಅಥವಾ ಎಂ.ಬಿ.ಎ. (ಆರ್ಥಿಕ ನಿರ್ವಾಹಣೆ) ಅಥವಾ ಎಂ.ಬಿ.ಎ./ ಎಂ.ಕಾಂ (ಆರ್ಥಿಕ ವಿಶ್ಲೇಷಣೆ) ಅಥವಾ ಯು.ಜಿ.ಸಿ ಯು 'ಆರ್ಥಿಕ' ಎಂಬುದನ್ನು ಒಂದು ವಿಷಯವನ್ನಾಗಿ ಅಭ್ಯಸಿಸಿರುವ ಕುರಿತು ಅಧಿಸೂಚನೆ ಹೊರಡಿಸಿರುವ ಯಾವುದೇ ಇತರ ಸ್ನಾತಕೋತ್ತರ ಪದವಿಯ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು **ಅಥವಾ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಸದಸ್ಯರು ಅಥವಾ ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಅಸೋಸಿಯೇಟ್ ಸದಸ್ಯರು ಆಗಿರತಕ್ಕದ್ದು.**	"Must be a holder of Master's degree in Commerce (M.Com.) or must be holder of M.B.A (Finance) or M.B.A (Financial Management) or M.B.A./M.Com(Financial Analysis) or any other Master degree's notified by University Grants Commission with 'Finance' as one of the subject from an University established by Law in India or a member of institute of Chartered Accountants of India or an Associate member of Institute of Cost Accountants of India".
ಪರಂತು, ಅಭ್ಯರ್ಥಿಗಳು ಮೇಲ್ಕಂಡ ಯಾವುದಾದರೂ ಪರೀಕ್ಷೆಗೆ ಹಾಜರಾಗಿದ್ದಲ್ಲಿ ಮತ್ತು ಆ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಆಯೋಗವು ನಡೆಸುವ ಪೂರ್ವಭಾವಿ ಪರೀಕ್ಷೆಗೆ ಶೈಕ್ಷಣಿಕವಾಗಿ ಅರ್ಹರಾಗುವುದಾದಲ್ಲಿ, ಆದರೆ ಆ ಪರೀಕ್ಷೆಯ ಫಲಿತಾಂಶ ಪ್ರಕಟಗೊಳ್ಳದೇ ಇದ್ದಲ್ಲಿ, ಅಂತಹ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.	Provided that, candidates who have appeared for an examination, passing of which would render them educationally qualified for preliminary examination conducted by the Commission, but the results of which have not been declared, are also eligible for admission to such preliminary examination.
ಮುಖ್ಯ ಪರೀಕ್ಷೆಯನ್ನು ತೆಗೆದುಕೊಳ್ಳಬಹುದೆಂದು ಆಯೋಗವು ಘೋಷಿಸಿದ ಅರ್ಹರಾದ ಎಲ್ಲಾ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗ ಸಂಬಂಧಿಸಿದ ವಿದ್ಯಾರ್ಹತಾ ಪರೀಕ್ಷೆಯನ್ನು ಪಾಸು ಮಾಡಿರುವ ಬಗ್ಗೆ ಪ್ರಮಾಣ ಪತ್ರವನ್ನು ಅಪ್ಲೋಡ್ ಮಾಡತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಪ್ರವೇಶ ನೀಡುವುದಿಲ್ಲ.	All candidates who are declared qualified by the Commission for taking the Main Examination shall be required to produce proof of passing the requisite Examination along with their application of the Main examination failing which such candidates shall not be admitted to the Main examination.

<u>ವಿಶೇಷ ಸೂಚನೆ</u>:- ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನಿಗದಿತ ವಿದ್ಯಾರ್ಹತೆಯ ಅಂತಿಮ ವರ್ಷದಲ್ಲಿ/ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳ ಫಲಿತಾಂಶ ಒಂದು ವೇಳೆ ಪ್ರಕಟವಾಗಿರದಿದ್ದಲ್ಲಿ, ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಂಬಂಧಿಸಿದ ವಿದ್ಯಾರ್ಹತೆ ಪರೀಕ್ಷೆಯನ್ನು ಪಾಸು ಮಾಡಿರುವ ಬಗ್ಗೆ ಅಂತರ್ಜಾಲದಿಂದ ಡೌನ್‌ಲೋಡ್ ಮಾಡಿಕೊಂಡಿರುವ Result Sheet/ಅಂಕಪಟ್ಟಿಗಳನ್ನು ಕಂಟ್ರೋಲರ್/ರಿಜಿಸ್ಟ್ರಾರ್‌ರವರಿಂದ ದೃಢೀಕರಿಸಿ (Attested) ಒದಗಿಸತಕ್ಕದ್ದು, ತಪ್ಪಿದ್ದಲ್ಲಿ ವಿದ್ಯಾರ್ಹತೆ ಹಾಗೂ ಅಭ್ಯರ್ಥಿತ್ವವನ್ನು ತಿರಸ್ಕರಿಸಲಾಗುವುದು.

8) ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ:-

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆಯೋಗವು ನಿಗದಿಪಡಿಸುವ ಯಾವುದೇ ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು.

9) ವಯೋಮಿತಿ:-

ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರಲ್ಲಿ ಈ ಕೆಳಕಂಡಂತೆ ವಯೋಮಿತಿಯನ್ನು ನಿಗದಿಪಡಿಸಲಾಗಿರುತ್ತದೆ.

ಕನಿಷ್ಠ ವಯೋಮಿತಿ	21 ವರ್ಷ
ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	35 ವರ್ಷಗಳು
ಪ್ರವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	38 ವರ್ಷಗಳು
ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	40 ವರ್ಷಗಳು

ನಿಯಮಾನುಸಾರ ನಿಗದಿಪಡಿಸಿರುವ ವಯೋಮಿತಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 262 ಸೇನೆನಿ 2025, ದಿನಾಂಕ:29-01-2026ರನ್ವಯ ಹೆಚ್ಚುವರಿಯಾಗಿ 05 ವರ್ಷಗಳ ವಯೋಮಿತಿ ಸಡಿಲಿಕೆ (as a one time measure) ಯನ್ನು ಅಳವಡಿಸಿಕೊಂಡು ನೇಮಕಾತಿ ಪ್ರಾಧಿಕಾರದಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅದರಂತೆ ಸದರಿ ಹುದ್ದೆಗಳ ಅಧಿಸೂಚನೆಯಲ್ಲಿ ಕೆಳಕಂಡಂತೆ ವಯೋಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಈ ಕೆಳಕಂಡ ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು:

ಕನಿಷ್ಠ ವಯೋಮಿತಿ	**21 ವರ್ಷ**
ಸಾಮಾನ್ಯ ಅರ್ಹತೆಯಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	**40 ವರ್ಷಗಳು**
ಪ್ರವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	**43 ವರ್ಷಗಳು**
ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡ/ಪ್ರವರ್ಗ-1 ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ	**45 ವರ್ಷಗಳು**

9.1 ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

(ಅ) ಮಾಜಿ ಸೈನಿಕನಾಗಿದ್ದಲ್ಲಿ	ಸೇವೆ ಸಲ್ಲಿಸಿರುವಷ್ಟುವ ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.
(ಆ) ಅಂಗವಿಕಲ ಅಭ್ಯರ್ಥಿಗಳಿಗೆ	10 ವರ್ಷಗಳು
(ಇ)ವಿಧವೆಯಾಗಿದ್ದಲ್ಲಿ (ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುವುದಿಲ್ಲವೆಂಬ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡು ಆಯೋಗವು ಸೂಚಿಸಿದಾಗ ಇದರ ಮೂಲ ಪ್ರತಿಯನ್ನು ಪರಿಶೀಲನೆಗೆ ಹಾಜರುಪಡಿಸಬೇಕು)	10 ವರ್ಷಗಳು

9.2 ವಿವರಣೆ:- ಜನ್ಮ ದಿನಾಂಕಕ್ಕಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ/ಎಸ್.ಎಸ್.ಎಲ್.ಸಿ ವರ್ಗಾವಣೆ ಪ್ರಮಾಣಪತ್ರ (ಟಿ..ಸಿ)/ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (Extract of cumulative record) ತೋರಿಸುವ ದಾಖಲೆಗಳನ್ನು ಪರಿಗಣಿಸಲಾಗುವುದು. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

10. ಹುದ್ದೆಗಳ ವರ್ಗೀಕರಣ:

10.1 ಗ್ರೂಪ್ - `ಎ' ಹುದ್ದೆಗಳು - ಉಳಿಕೆ ಮೂಲ ವೃಂದ (ಆರ್.ಪಿ.ಸಿ)

ಸಹಾಯಕ ನಿಯಂತ್ರಕರು-15 ಹುದ್ದೆಗಳು /Assistant Controller- 15posts

ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕ	ಅಂಗವಿಕಲ	ಒಟ್ಟು
ಪರಿಶಿಷ್ಟ ಜಾತಿ	-	1	1	-	-	2
ಪ್ರವರ್ಗ-1	-	-	1	-	-	1
ಪ್ರವರ್ಗ-2(ಎ)	1	1	1	-	-	3
ಪ್ರವರ್ಗ -3(ಎ)	-	1	-	-	-	1
ಸಾಮಾನ್ಯ ಅರ್ಹತೆ	2	2	2	1	1 LD	8
ಒಟ್ಟು	3	5	5	1	1	15

Note: LD-Locomotor Disablity (OA, OL, BA, BL, OAL, BLOA, BLA, Dw, LC, AAv)

OA-One Arm	**DW**-Dwarfism
OL- One Leg	**LC**-Leprosy cured
BA- Both Arms	**AAV**-Acid Attack Victims
BL-Both Legs	**BLOA**-Both Leg One Arm
OAL-One Arm One Leg	**BLA**-Both Leg & Both Arms

10.2 ಗ್ರೂಪ್ - `ಬಿ' ಹುದ್ದೆಗಳು - ಉಳಿಕೆ ಮೂಲ ವೃಂದ (RPC)

ಲೆಕ್ಕಪರಿಶೋಧನಾಧಿಕಾರಿ/Audit Officer -53 ಹುದ್ದೆಗಳು

ಮೀಸಲಾತಿ		ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕ	ಅಂಗವಿಕಲ	ಕನ್ನಡ ಮಾಧ್ಯಮ ಅಭ್ಯರ್ಥಿ	ಒಟ್ಟು
ಪರಿಶಿಷ್ಟ ಜಾತಿ	ಎ	1	1	1	-	-	-	3
	ಬಿ	1	1	-	-	-	-	2
	ಸಿ	* 1	1	-	-	-	-	2
ಪರಿಶಿಷ್ಟ ಪಂಗಡ		-	1	1	-	-	-	2
ಪ್ರವರ್ಗ-1		-	1	1	-	1 B,LV	-	3
ಪ್ರವರ್ಗ-2(ಎ)		-	3	3	1	-	1	8
ಪ್ರವರ್ಗ-2(ಬಿ)		-	-	1	-	1 B,LV	-	2
ಪ್ರವರ್ಗ-3(ಎ)		-	-	1	-	1 B,LV	-	2
ಪ್ರವರ್ಗ-3(ಬಿ)		-	1	1	-	1 B,LV	-	3
ಸಾಮಾನ್ಯ ಅರ್ಹತೆ		6	8	7	3	1 D,HH	1	26
ಒಟ್ಟು		9	17	16	4	5	2	53

Note: 1) **B,LV- Blind, Low Vision.** 2) **D,HH – Deaf & Hard of Hearing**

- **ನೇಮಕಾತಿ ಪ್ರಾಧಿಕಾರವು ದೃಢೀಕರಿಸಿ ನೀಡಿರುವ ಹುದ್ದೆಗಳ ವರ್ಗೀಕರಣವು ಮೇಲ್ಕಂಡಂತೆ ಇರುತ್ತದೆ.**

*** ಪರಿಶಿಷ್ಟ ಜಾತಿ ಪ್ರವರ್ಗ-ಸಿ ಗೆ ಲಭ್ಯವಾಗುವ ಹುದ್ದೆಗಳಲ್ಲಿ 20%ರಷ್ಟು ಹುದ್ದೆಗಳನ್ನು ಪರಿಶಿಷ್ಟ ಜಾತಿಯ ಪ್ರವರ್ಗ-ಸಿಯಲ್ಲಿನ 59 (ಅನುಬಂಧ-5ರಲ್ಲಿರುವಂತೆ) ಅತ್ಯಂತ ಹಿಂದುಳಿದ ಜಾತಿಗಳಿಗೆ**

ಮೀಸಲಿರಿಸುವುದು. ಒಂದು ವೇಳೆ ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದಿದ್ದಲ್ಲಿ ಈ ಹುದ್ದೆಗಳನ್ನು ಪ್ರವರ್ಗ-ಸಿ ಯ ಇತರೆ ಜಾತಿಗಳ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡುವುದು.

- **<u>ವಿಶೇಷ ಸೂಚನೆ</u>:-** ಅಧಿಸೂಚಿಸಿರುವ ಹುದ್ದೆಗಳಿಗೆ Persons with Disabilities **SCHEDULE** ಅನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ. ಸದರಿ **SCHEDULE**ಗಳಲ್ಲಿ ಗುರುತಿಸಿರುವ ಅಂಗವೈಕಲ್ಯತೆ ಸ್ವರೂಪ (Type of Disability)ಗಳನ್ನು ಹೊರತುಪಡಿಸಿ, ಇನ್ನಿತರೆ ಯಾವುದೇ ಅಂಗವೈಕಲ್ಯತೆ (Disability) ಹೊಂದಿದ ಅಭ್ಯರ್ಥಿಗಳನ್ನು ಅಧಿಸೂಚಿಸಲಾದ ಹುದ್ದೆಗಳ ಆಯ್ಕೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

- **<u>ಅಭ್ಯರ್ಥಿಗಳ ಗಮನಕ್ಕೆ:</u>** ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತಹ ಸರ್ಕಾರದ ನಿಯಮಗಳು/ಆದೇಶಗಳು/ಸುತ್ತೋಲೆಗಳು ಆಯೋಗದ ವೆಬ್‌ಸೈಟ್‌ನ ಮುಖಪುಟ (Home Page) ದಲ್ಲಿ ಲಭ್ಯವಿರುತ್ತವೆ.

- **<u>ವಿಶೇಷ ಸೂಚನೆ</u>:- ಮೇಲ್ಕಾಣಿಸಿದ ರಿಕ್ತ ಸ್ಥಾನಗಳು ತಾತ್ಕಾಲಿಕವಾಗಿದ್ದು, ಬದಲಾವಣೆಗೆ ಒಳಪಟ್ಟಿರುತ್ತವೆ. ಹಾಗೆಯೇ ಮೀಸಲಾತಿ ವರ್ಗೀಕರಣವು ಬದಲಾವಣೆಗೆ ಒಳಪಟ್ಟಿರುತ್ತವೆ.**

11) <u>ನೇಮಕಾತಿ ವಿಧಾನ:-</u>

ಕರ್ನಾಟಕ ರಾಜ್ಯ ಲೆಕ್ಕ ಪತ್ರ ಸೇವೆಗಳು (ನೇಮಕಾತಿ) ನಿಯಮಗಳು 2011ರ ಷೆಡ್ಯೂಲ್-2ನಲ್ಲಿನ ಸೆಕ್ಷನ್-1ರಲ್ಲಿ ನಿಗದಿಪಡಿಸಿರುವಂತೆ ಸ್ಪರ್ಧಾತ್ಮಕ ಪರೀಕ್ಷೆಯು ಎರಡು ಹಂತಗಳನ್ನು ಒಳಗೊಂಡಿರುತ್ತದೆ. ಹೆಚ್ಚಿನ ವಿವರಗಳಿಗೆ ಆಯೋಗದ ವೆಬ್ ಸೈಟ್ ನಲ್ಲಿರುವ ನಿಯಮಗಳನ್ನು ನೋಡಲು ಸೂಚಿಸಿದೆ.

(1) **<u>ಪೂರ್ವಭಾವಿ ಪರೀಕ್ಷೆ</u>:- (ವಸ್ತುನಿಷ್ಠ ಬಹು ಆಯ್ಕೆ ಮಾದರಿ)** ಮುಖ್ಯ ಪರೀಕ್ಷೆಗೆ (Main Examination) ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ನಡೆಸಲಾಗುವುದು.

(2) **<u>ಮುಖ್ಯ ಪರೀಕ್ಷೆ</u>:- (ಲಿಖಿತ ಪರೀಕ್ಷೆ)** ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಗ್ರೂಪ್ - 'ಎ' ಮತ್ತು ಗ್ರೂಪ್ - 'ಬಿ' ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ನಡೆಸಲಾಗುವುದು.

<u>ಸೆಕ್ಷನ್ 'ಎ' - ಪೂರ್ವಭಾವಿ ಪರೀಕ್ಷೆ</u>:-

ಪೂರ್ವಭಾವಿ ಪರೀಕ್ಷೆಯು 02 ಪತ್ರಿಕೆಗಳನ್ನು ಒಳಗೊಂಡಿದ್ದು (ವಸ್ತುನಿಷ್ಠ ಬಹು ಆಯ್ಕೆ ಮಾದರಿ) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಪತ್ರಿಕೆ	ವಿಷಯ	ಗರಿಷ್ಠ ಅಂಕಗಳು	ಅವಧಿ	ಕಡ್ಡಾಯ/ಐಚ್ಛಿಕ
ಪತ್ರಿಕೆ-1	ಸಾಮಾನ್ಯ ಅಧ್ಯಯನ (Genaral Studies)	150	2 ಗಂಟೆ	ಕಡ್ಡಾಯ
ಪತ್ರಿಕೆ-2	ವಾಣಿಜ್ಯ ಶಾಸ್ತ್ರ ಮತ್ತು ನಿರ್ವಹಣೆ (Commerce & Managament)	300	2 ಗಂಟೆ	ಕಡ್ಡಾಯ
ಒಟ್ಟು		**450**	-	-

<u>ಟಿಪ್ಪಣಿ</u>:-

(ಅ) ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಇರುತ್ತದೆ.
(ಆ) ಪೂರ್ವಭಾವಿ ಪರೀಕ್ಷೆಯಲ್ಲಿನ ಪ್ರಶ್ನೆಗಳ ಮಟ್ಟವು ಪದವಿ ಮಟ್ಟದ್ದಾಗಿರುತ್ತದೆ.
(ಇ) ಪ್ರತಿಯೊಂದು ಪತ್ರಿಕೆಯು 2 ಗಂಟೆಗಳ ಕಾಲಾವಧಿಯದ್ದಾಗಿರುತ್ತದೆ.
(ಈ) ಅಧಿಸೂಚನೆಯಲ್ಲಿ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 1:20ರ ಅನುಪಾತದಲ್ಲಿ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮುಖ್ಯ ಪರೀಕ್ಷೆಗೆ ಪ್ರವೇಶ ನೀಡಲಾಗುತ್ತದೆ.

ಸೆಕ್ಷನ್ 'ಬಿ' – ಮುಖ್ಯ ಪರೀಕ್ಷೆ:- ಮುಖ್ಯ ಪರೀಕ್ಷೆಯು ಲಿಖಿತ ಪರೀಕ್ಷೆಯನ್ನು ಒಳಗೊಂಡಿರುತ್ತದೆ.

ಲಿಖಿತ ಪರೀಕ್ಷೆ:-

ಪತ್ರಿಕೆ	ವಿಷಯ	ಗರಿಷ್ಠ ಅಂಕಗಳು	ಅವಧಿ	ಕಡ್ಡಾಯ/ ಐಚ್ಛಿಕ
ಪತ್ರಿಕೆ-1	ಕನ್ನಡ	150	3 ಗಂಟೆ	ಕಡ್ಡಾಯ
ಪತ್ರಿಕೆ-2	ಇಂಗ್ಲೀಷ್	150	3 ಗಂಟೆ	ಕಡ್ಡಾಯ
ಪತ್ರಿಕೆ-3	ಸಾಮಾನ್ಯ ಅಧ್ಯಯನ	300	3 ಗಂಟೆ	ಕಡ್ಡಾಯ
ಪತ್ರಿಕೆ-4	ಸಾಮಾನ್ಯ ಅಧ್ಯಯನ	300	3 ಗಂಟೆ	ಕಡ್ಡಾಯ
ಪತ್ರಿಕೆ-5	ಫೈನಾನ್ಶಿಯಲ್ ಅಕೌಂಟಿಂಗ್, ಮ್ಯಾನೇಜ್ ಮೆಂಟ್ ಅಂಡ್ ಅನಾಲಿಸಿಸ್	300	3 ಗಂಟೆ	ಕಡ್ಡಾಯ
ಪತ್ರಿಕೆ-6	ಪ್ರಿನ್ಸಿಪಲ್ಸ್ ಆಫ್ ಮ್ಯಾನೇಜ್ ಮೆಂಟ್, ಆರ್ಗನೈಜೇಷನ್ ಬಿಹೇವಿಯರ್, ಟ್ರೈನಿಂಗ್ ಅಂಡ್ ಡೆವೆಲಪ್ ಮೆಂಟ್	300	3 ಗಂಟೆ	ಕಡ್ಡಾಯ
ಪತ್ರಿಕೆ-7	ಕಾರ್ಪೋರೇಟ್ ಫೈನಾನ್ಸ್, ಬಿಸಿನೆಸ್ ಎಕನಾಮಿಕ್ಸ್ ಅಂಡ್ ಟ್ಯಾಕ್ಸೇಷನ್	300	3 ಗಂಟೆ	ಕಡ್ಡಾಯ
ಪತ್ರಿಕೆ-8	ಪ್ರಿನ್ಸಿಪಲ್ಸ್ ಅಂಡ್ ಪ್ರಾಕ್ಟೀಸ್ ಆಫ್ ಆಡಿಟಿಂಗ್, ಕಂಪ್ಯೂಟರ್ ಕಾನ್ಸೆಪ್ಟ್ಸ್ ಅಂಡ್ ಇ-ಕಾಮರ್ಸ್	300	3 ಗಂಟೆ	ಕಡ್ಡಾಯ
	ಒಟ್ಟು	**2100**	-	-

- ಅಭ್ಯರ್ಥಿಗಳ ಗಮನಕ್ಕೆ: ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳು, ಆದೇಶಗಳು, ಸುತ್ತೋಲೆಗಳು ಆಯೋಗದ ವೆಬ್‌ಸೈಟ್‌ನ ಮುಖಪುಟದಲ್ಲಿ (Home Page) ನಲ್ಲಿ ಲಭ್ಯವಿರುತ್ತದೆ.
- ಕರ್ನಾಟಕ ರಾಜ್ಯ ಲೆಕ್ಕ ಪತ್ರ ಸೇವೆಗಳು (ನೇಮಕಾತಿ) ನಿಯಮಗಳು 2011ರ ಷೆಡ್ಯೂಲ್-2ನಲ್ಲಿನ ಸೆಕ್ಷನ್-II ರಲ್ಲಿ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಯ ವಿವರವಾದ ಪಠ್ಯಕ್ರಮವನ್ನು ನೀಡಲಾಗಿರುತ್ತದೆ. ಸದರಿ ಪಠ್ಯಕ್ರಮವು ಆಯೋಗದ ವೆಬ್ ಸೈಟ್ http://kpsc.kar.nic.in/Syllabus ನಲ್ಲಿ ಲಭ್ಯವಿರುತ್ತದೆ.

ಟಿಪ್ಪಣಿ:-

ಅ) ಕಡ್ಡಾಯ ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಗಳಲ್ಲಿ ಪಡೆದ ಅಂಕಗಳು ಅರ್ಹತಾದಾಯಕ ಸ್ವರೂಪದ್ದಾಗಿರುತ್ತವೆ. ಅರ್ಹತೆ ಪಡೆಯಲು ಈ ಪ್ರತಿಯೊಂದು ಪತ್ರಿಕೆಯಲ್ಲಿ ಕನಿಷ್ಠ ಶೇಕಡ 30 ಮತ್ತು ಸರಾಸರಿ ಶೇಕಡ 35 ಅಂಕಗಳನ್ನು ನಿಗದಿಪಡಿಸಲಾಗಿದೆ. ಈ ಎರಡೂ ಪತ್ರಿಕೆಗಳಲ್ಲಿ ಗಳಿಸಿದ ಅಂಕಗಳನ್ನು ಅಭ್ಯರ್ಥಿಗಳ ಆಯ್ಕೆಯ ಅರ್ಹತೆಯನ್ನು ನಿಗದಿಪಡಿಸುವಲ್ಲಿ ಪರಿಗಣಿಸಲಾಗುವುದಿಲ್ಲ. ಈ ಎರಡು ಪತ್ರಿಕೆಗಳಲ್ಲಿ ನಿಗದಿತ ಅಂಕಗಳನ್ನು ಗಳಿಸದ ಅಭ್ಯರ್ಥಿಗಳು ಇತರೆ ಪತ್ರಿಕೆಗಳಲ್ಲಿ ಎಷ್ಟೇ ಹೆಚ್ಚು ಅಂಕಗಳನ್ನು ಗಳಿಸಿದ್ದರೂ ಆಯ್ಕೆಗೆ ಅರ್ಹರಾಗುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಗಳ ಇತರೆ ವಿಷಯಗಳಲ್ಲಿ ಪಡೆದ ಅಂಕಗಳನ್ನು ಪ್ರಕಟಿಸುವುದಿಲ್ಲ.

ಆ) ಮುಖ್ಯ ಪರೀಕ್ಷೆಯು ವಿವರಣಾತ್ಮಕ ಮಾದರಿಯಲ್ಲಿರುತ್ತದೆ ಮತ್ತು ಎಲ್ಲಾ ಪತ್ರಿಕೆಗಳು ಕಡ್ಡಾಯವಾಗಿರುತ್ತದೆ.

ಇ) ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳೆರಡರಲ್ಲೂ ಮುದ್ರಿತವಾಗಿರುತ್ತದೆ. ಅಭ್ಯರ್ಥಿಗಳು ಪತ್ರಿಕೆಯ ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡ ಅಥವಾ ಸಂಪೂರ್ಣವಾಗಿ ಇಂಗ್ಲೀಷ್ ಮಾಧ್ಯಮದಲ್ಲೇ ಉತ್ತರಿಸತಕ್ಕದ್ದು (ಅರ್ಹತಾದಾಯಕ ಪತ್ರಿಕೆಗಳನ್ನು ಹೊರತುಪಡಿಸಿ).

ಈ) ಮುಖ್ಯ ಪರೀಕ್ಷೆಯ ಪತ್ರಿಕೆ-(1) ಕಡ್ಡಾಯ ಕನ್ನಡ ಹಾಗೂ ಪತ್ರಿಕೆ-(2) ಕಡ್ಡಾಯ ಆಂಗ್ಲಭಾಷೆ ಪತ್ರಿಕೆಗಳು ಎಸ್.ಎಸ್.ಎಲ್.ಸಿ ಯ ಪ್ರಥಮ ಭಾಷೆಯ ಮಟ್ಟದ್ದಾಗಿರುತ್ತದೆ. ಮುಖ್ಯ ಪರೀಕ್ಷೆಯ ಇನ್ನಿತರ ವಿಷಯಗಳ ಪತ್ರಿಕೆಗಳು ಪದವಿ ಮಟ್ಟದ್ದಾಗಿರುತ್ತದೆ.

"ಸದರಿ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು 1997ರ ನಿಯಮ (5) ಮತ್ತು (7) ಯಥಾವತ್ತಾಗಿ ಅನ್ವಯವಾಗುತ್ತವೆ" ಎಂದು ಸದರಿ ನೇಮಕಾತಿ ನಿಯಮಾವಳಿಗಳಲ್ಲಿ ಸೂಚಿಸಿದ್ದು, ಅದರಂತೆ ನಿಯಮ (5) ವಯೋಮಿತಿ ಮತ್ತು ನಿಯಮ (7) ಶೈಕ್ಷಣಿಕ ವಿದ್ಯಾರ್ಹತೆಗೆ ಸಂಬಂಧಪಟ್ಟದ್ದಾಗಿರುತ್ತದೆ.

ವಿಶೇಷ ಸೂಚನೆ:- ಅಧಿಸೂಚನೆ ಸಂಖ್ಯೆ:ಎಫ್ ಡಿ 154 ಎಸ್ ಎ ಡಿ 2022, ದಿನಾಂಕ:19-10-2023ರನ್ವಯ ಸದರಿ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆಯನ್ನು ತೆಗೆದು ಹಾಕಲಾಗಿರುತ್ತದೆ. ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜೇಷ್ಠತೆ ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ವಿಶೇಷ ಸೂಚನೆ:-

1. ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಅವರ ಪ್ರವೇಶ ಪತ್ರ ಹಾಗೂ ಅವರ ಭಾವಚಿತ್ರವಿರುವ ಗುರುತಿನ ಚೀಟಿ (ಚುನಾವಣಾ ಐಡಿ/ ಆಧಾರ್ ಕಾರ್ಡ್/ಡ್ರೈವಿಂಗ್ ಲೈಸನ್ಸ್/ಪಾನ್ ಕಾರ್ಡ್/ಪಾಸ್ ಪೋರ್ಟ್/ಸರ್ಕಾರಿ ನೌಕರರ ಐಡಿ) ಯನ್ನು ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಪರೀಕ್ಷಾ ಕೇಂದ್ರಕ್ಕೆ ಪ್ರವೇಶವನ್ನು ನೀಡಲಾಗುವುದಿಲ್ಲ.
2. **ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿರಡರಲ್ಲೂ ಇರುತ್ತವೆ.**

ಟಿಪ್ಪಣಿ:- ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲೇ ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

11. ಮೀಸಲಾತಿ /ಇತರೆ ಪ್ರಮಾಣ ಪತ್ರಗಳು:-

11.1 ಜಾತಿ/ಮೀಸಲಾತಿ ಪ್ರಮಾಣ ಪತ್ರಗಳು	(ಅ)	**ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾದ ನಮೂನೆಗಳು :-** ಪರಿಶಿಷ್ಟ ಜಾತಿ (ಪ್ರವರ್ಗ-ಎ,ಬಿ & ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು — **ನಮೂನೆ `ಡಿ'** ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು — **ನಮೂನೆ `ಇ'** ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು — **ನಮೂನೆ `ಎಫ್'** *ನಮೂನೆಯ ಮಾದರಿಗಳನ್ನು ಅಧಿಸೂಚನೆಯ ಕೊನೆಯಲ್ಲಿ ಅನುಬಂಧ-2ರಲ್ಲಿ ತೋರಿಸಲಾಗಿದೆ.
	(ಆ)	ಹಿಂದುಳಿದ ವರ್ಗಗಳ ಪ್ರವರ್ಗ-2(ಎ), ಪ್ರವರ್ಗ-2(ಬಿ), ಪ್ರವರ್ಗ-3(ಎ) ಮತ್ತು ಪ್ರವರ್ಗ-3(ಬಿ) ಮೀಸಲಾತಿ ಪ್ರಮಾಣ ಪತ್ರಗಳು 05 ವರ್ಷ ಚಾಲ್ತಿಯಲ್ಲಿರುತ್ತವೆ (Government Notification No SWD 155 BCA 2012 Dt: 17-02-2012 ರನ್ವಯ) ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಂಡು ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು. ಸರ್ಕಾರದ ಆದೇಶ .ಸಂಖ್ಯೆ: ಸಕಇ 179 ಬಿಸಿಎ 2010, ದಿನಾಂಕ:16-07-2011ರ ಆದೇಶದಲ್ಲಿ ತಿಳಿಸಿರುವಂತೆ ಸರ್ಕಾರಿ ಆದೇಶ ಸಂಖ್ಯೆ:ಸಕಇ 225 ಟಿಸಿಎಂ 2000, ದಿನಾಂಕ:30-03-2002ರ ಕ್ರಮ ಸಂಖ್ಯೆ:03 (ಎ ರಿಂದ ಎಂ ವರೆಗೆ) ಪ್ರವರ್ಗ 3ಎ ದಲ್ಲಿರುವ ಸದರಿ "ಬಲಿಜ" ಮತ್ತು ಉಪಜಾತಿಗಳಾದ ಬಲಜಿಗ/ ಬಣಜಿಗ/ ಗೌಡಬಣಜಿಗ, ನಾಯ್ಡು, ತೆಲಗ ಬಲಿಜ/ ತೆಲಗ ಬಣಜಿಗ/ ಶೆಟ್ಟಿಬಲಿಜ, ಶೆಟ್ಟಿ ಬಣಜಿಗ/ ಬಣಜಿಗ ಶೆಟ್ಟಿ, ದಾಸರ ಬಲಿಜ/ ದಾಸರ ಬಲಜಿಗ/ ದಾಸರ ಬಣಜಿಗ/ ದಾಸಬಣಜಿಗ, ಕಸ್ಬನ್, ಮುನ್ನೂರ/ ಮುನ್ನಾರ್/ ಮುನ್ನೂರ್‌ಕಾಪು, ಬಳಿಗಾರ/ ಬಳೆಬಣಜಿಗ/ ಬಳೆಬಲಜಿಗ/ ಬಳೆ ಜೆಟ್ಟಿ/ ಬಣಗಾರ, ರೆಡ್ಡಿ (ಬಲಿಜ), ಜನಪ್ಪನ್, ಉಪ್ಪಾರ (ಬಲಿಜ), ತುಳೇರು (ಬಲಿಜ) ಜನಾಂಗವನ್ನು ಸಂವಿಧಾನದ ಅನುಚ್ಛೇದ 15 (4)ರ ಶಿಕ್ಷಣ ಸಲುವಾಗಿ ಮಾತ್ರ ಮೀಸಲಾತಿ ಪಡೆಯಲು ಮೇಲ್ಕಂಡ ಆದೇಶ ದಿನಾಂಕ:30-03-2002ರ ಪಟ್ಟಿಯಲ್ಲಿ ಪ್ರವರ್ಗ 3ಎ ರಿಂದ ಪ್ರವರ್ಗ 2ಎ ಗೆ ಸೇರಿಸಲಾಗಿದೆ. ಆದರೆ ಅನುಚ್ಛೇದ 16(4) ಉದ್ಯೋಗದ ಸಲುವಾಗಿ ಈಗಿರುವಂತೆ ಪ್ರವರ್ಗ-3(ಎ) ರಲ್ಲಿ ಮೀಸಲಾತಿ ಪಡೆಯಲು ಬಲಿಜ ಮತ್ತು ಅದರ ಉಪಜಾತಿಗಳನ್ನು ಮುಂದುವರೆಸಲಾಗಿದೆ. ಆದ್ದರಿಂದ, ಮೇಲ್ಕಂಡ ಸರ್ಕಾರಿ ಆದೇಶದನುಸಾರ ಸದರಿ ಜಾತಿ/ಉಪಜಾತಿ ಅಭ್ಯರ್ಥಿಗಳು ಉದ್ಯೋಗದಲ್ಲಿನ ಮೀಸಲಾತಿಗಾಗಿ ಆನ್-ಲೈನ್ ಅರ್ಜಿಯಲ್ಲಿ **ಕಡ್ಡಾಯವಾಗಿ 3(ಎ) ಮೀಸಲಾತಿ ಕೋರತಕ್ಕದ್ದು** ಹಾಗೂ ಶಿಕ್ಷಣದ ಸಲುವಾಗಿ ಪಡೆದ 2(ಎ) ಮೀಸಲಾತಿ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

	(ಇ)	ಪ.ಜಾ/ಪ.ಪಂ/ಪ್ರ-1ರ ಅಭ್ಯರ್ಥಿಗಳು ಪಡೆದಿರುವ/ಪಡೆಯುವ ಪ್ರಮಾಣ ಪತ್ರಗಳು ಜೀವಿತ ಅವಧಿಯವರೆಗೆ ಅಥವಾ ರದ್ದು ಮಾಡುವವರೆವಿಗೆ ಸಿಂಧುತ್ವವನ್ನು ಹೊಂದಿದ್ದು, ಇಂತಹ ಪ್ರಮಾಣ ಪತ್ರಗಳನ್ನು ಚಾಲ್ತಿ ಅವಧಿ ಮಿತಿಯಿಲ್ಲದೇ ಪರಿಗಣಿಸಲಾಗುವುದು. (ಸರ್ಕಾರದ ಸುತ್ತೋಲೆ ಸಂಖ್ಯೆ SWD 155 BCA 2011ದಿನಾಂಕ 22-02-2012)
	(ಈ)	ಆದರೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಡಿಪಿಎಆರ್ 19 ಎಸ್ ಬಿ ಸಿ 86 ದಿ:24-06-1986 ರಲ್ಲಿನ ಆದೇಶದಲ್ಲಿ ತಿಳಿಸಿರುವಂತೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕ ಆದ ನಂತರ ಯಾವುದೇ ಕಾರಣದಿಂದಲು ಅಭ್ಯರ್ಥಿಗಳು ಸಲ್ಲಿಸುವ ಜಾತಿ ಮತ್ತು ಆದಾಯ ಘೋಷಣೆ ಪತ್ರಗಳನ್ನು ಅಂಗೀಕರಿಸಬಾರದೆಂದ ಸ್ಪಷ್ಟಪಡಿಸಲಾಗಿದೆ. ಅದರಂತೆ ಈ ಮೇಲಿನ ಎಲ್ಲಾ ಜಾತಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡು ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕು.
11.2 ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ	(ಅ)	ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ದಿನಾಂಕ:13-02-2001ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.
	(ಆ)	ಜಾತಿ ಹಾಗೂ ಗ್ರಾಮೀಣ ಮೀಸಲಾತಿ ಕೋರಿರುವ ಅಭ್ಯರ್ಥಿಗಳ ಜಾತಿ ಮೀಸಲಾತಿ ಪ್ರಮಾಣ ಪತ್ರಗಳು ಅಸಿಂಧುವಾದಲ್ಲಿ, ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯು ಸಹ ತಿರಸ್ಕೃತವಾಗುತ್ತದೆ. ಮುಂದುವರೆದು, ಗ್ರಾಮೀಣ ಮೀಸಲಾತಿಯನ್ನು ಕೋರುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ತರಕ್ಕೆ (Creamy layer) ಸೇರಿಲ್ಲದಿರುವ ಬಗ್ಗೆ ನಮೂನೆ-1ರಲ್ಲಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ಸಕ್ಷಮ ಪ್ರಾಧಿಕಾರದಿಂದ ಪಡೆದಿಟ್ಟುಕೊಂಡಿರತಕ್ಕದ್ದು. ನಮೂನೆ-1 ರಲ್ಲಿ ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರತಕ್ಕದ್ದು ಹಾಗೂ ಅಭ್ಯರ್ಥಿಗಳು ತಮಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವಾಗ ಅಪ್ಲೋಡ್ ಮಾಡತಕ್ಕದ್ದು.
	(ಇ)	ಅಂತೆಯೇ ಗ್ರಾಮೀಣ ಮೀಸಲಾತಿಯನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ,2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು **ನಮೂನೆ-2ರಲ್ಲಿ** ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡು **ಅಪ್ಲೋಡ್ ಮಾಡತಕ್ಕದ್ದು.** ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. **(*ನಮೂನೆ-01 ಮತ್ತು 02ರ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ಅನುಬಂಧ-2ರಲ್ಲಿ ತೋರಿಸಲಾಗಿದೆ).**
11.3 ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಮೀಸಲಾತಿ	(ಅ)	ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೆನೆನಿ 2001 ದಿನಾಂಕ: 24-10-2002 ರನ್ವಯ ಕನ್ನಡ ಮಾಧ್ಯಮದ ಮೀಸಲಾತಿ ಕೋರುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡು ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು. **(ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ಅನುಬಂಧ-2 ರಲ್ಲಿ ತೋರಿಸಲಾಗಿದೆ).**
11.4 ಮಾಜಿ ಸೈನಿಕರಿಗೆ ಮೀಸಲಾತಿ	(ಅ)	ಮಾಜಿ ಸೈನಿಕ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಈ ಸಂಬಂಧ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಆಪ್‌ಲೋಡ್ ಮಾಡತಕ್ಕದ್ದು. (1) ಮಾಜಿ ಸೈನಿಕ ಎಂದರೆ ಸಶಸ್ತ್ರ, ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಾಗಿಲ್ಲದೇ) ಸೇವೆ ಸಲ್ಲಿಸಿರುವ ವ್ಯಕ್ತಿ ಎಂದು ಅರ್ಥ. ಆದರೆ ಡಿಫೆನ್ಸ್ ಸೆಕ್ಯುರಿಟಿ ಕೋರ್, ಜನರಲ್ ರಿಸರ್ವ್

		ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು (ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ **ಅಥವಾ** (ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಲ್ಲಿ ಬಿಡುಗಡೆಯಾದವನು **ಅಥವಾ** (ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ **ಅಥವಾ** ಈ) ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು. (i) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು. (ii) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ. (iii) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು **<u>ವಿವರಣೆ</u> :-** ಕೇಂದ್ರ ಸಶಸ್ತ್ರ ದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ. ಸೈನಿಕರ ಸೇವಾ ಒಪ್ಪಂದದ ಮುಕ್ತಾಯಕ್ಕೆ ಮುನ್ನ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪಡೆದಿಟ್ಟುಕೊಳ್ಳತಕ್ಕದ್ದು. ಅರ್ಜಿ ಸಲ್ಲಿಸುವಾಗ ಸದರಿ ಪ್ರಮಾಣ ಪತ್ರದ ದಿನಾಂಕವನ್ನು ಅರ್ಜಿಯಲ್ಲಿ ನಮೂದಿಸಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಇದೇ ನಿರಾಕ್ಷೇಪಣಾ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.
